ಓ.ಎಸ್. ನಂಃ **173/2022**
**<u>ಪಿಡಬ್ಲ್ಯೂಃ 1</u>**

ದಿನಾಂಕಃ 21-06-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ವಿ ಕೆ ವಕೀಲರಿಂದಃ</u>

5. ವಾದ ಪತ್ರದ 3 ನೇ ಖಂಡಿಕೆಯಲ್ಲಿ ದಾವಾ ಸರ್ವೆ ನಂ.585/1 ರಲ್ಲಿ ಇರುವ ಒಟ್ಟು 12 ಎಕರೆ 09 ಗುಂಟೆ ಪೈಕಿ 09 ಎಕರೆ ನನಗೆ ಸೇರಿದ್ದು, ಉಳಿದ 03 ಎಕರೆ 09 ಗುಂಟೆ ಒಬ್ಬ ನಾಗಮೋಹನಸಿಂಗ್ ರವರಿಗೆ ಸೇರಿರುತ್ತದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ನಾಗಮೋಹನಸಿಂಗ್ ರವರ ಜಮಿನು ನಿಮ್ಮ 09 ಎಕರೆಯ ಯಾವ ದಿಕ್ಕಿಗೆ ಇದೆ ಎಂದರೆ ಸಾಕ್ಷಿಯು ಸದರಿಯವರು ಜಮೀನು ಸ್ವಾದೀನದಲ್ಲಿ ಇಲ್ಲ, ಆದರೆ ಪಹಣಿಯಲ್ಲಿ ಅವರ ಹೆಸರು ಇರುವುದರಿಂದ ವಾದ ಪತ್ರದಲ್ಲಿ ಈ ಮೇಲಿನಂತೆ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ನಾಗಮೋಹನಸಿಂಗ್ ರವರ ಜಮೀನು ಯಾರ ಸ್ವಾದೀನದಲ್ಲಿ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಮ್ಮ ಸ್ವಾದೀನದಲ್ಲಂತು ಇಲ್ಲ ಎಂದು ನುಡಿಯುತ್ತಾರೆ.

6. ನಮ್ಮ ಜಮೀನು ಪೂರ್ವಕ್ಕೆ ಇರುವ ಸರಕಾರಿ ಸರ್ವೆ ನಂ.585/3 ನೇದ್ದರಲ್ಲಿ ಎಷ್ಟು ಜಮೀನು ಇದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಸರಕಾರಿ ಜಮೀನಿನಲ್ಲಿ ಸರಕಾರಿ ಶಾಲೆ, ವಿದ್ಯಾರ್ಥಿಗಳ ವಸತಿ ನಿಲಯ, ಅಂಗನವಾಡಿ ಕೇಂದ್ರ ಹಾಗೂ ಪಶು ಆರೋಗ್ಯ ಕೆಂದ್ರಗಳು ಇದ್ದಾವೆ. ಸದರಿ ಜಮೀನಿನಲ್ಲಿ ಗ್ರಂಥಾಲಯ ಇದೆಯೇ ಎಂದರೆ ಸಾಕ್ಷಿಯು ಗ್ರಂಥಾಲಯ ಸದರಿ ಸರ್ವೆ ನಂ.585/3 ರಲ್ಲಿ ಇಲ್ಲ, ಗ್ರಾಮ ಠಾಣಾ ಆಸ್ತಿಯಲ್ಲಿ ಇದೆ ಎಂದು ನುಡಿಯುತ್ತಾರೆ.

7. ಪ್ರತಿವಾದಿಯರ ತಂದೆ ಭೀಮುಲು ಮತ್ತು ಕನಕಪ್ಪ ರವರ ಅಣ್ಣ-ತಮ್ಮಂದಿರು ಆಗಿರುತ್ತಾರೆ ಎಂದರೆ ಸರಿ. ಸದರಿ ಇಬ್ಬರಿಗೆ ಸೇದ ಒಂದು ಹಳೆ ಮನೆ ಇದೆ ಎಂದರೆ ಸರಿ. ಸದರಿ ಮನೆಗೆ ಹೊಂದಿಕೊಂಡು ಚಂಡರಕಿ ಗ್ರಾಮದ ನರಸಣ್ಣ ಎಂಬುವವರ 50/79 ಸಂಖ್ಯೆಯ ಖಾಲಿ ಜಾಗ ಇದೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಭೀಮುಲು ಮತ್ತು

ಕನಕಪ್ಪ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಜಾಗ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಭೀಮುಲು ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಭೀಮುಲು ತೀರಿಕೊಂಡ ನಂತರ ಸದರಿ ಜಾಗದ ಖಾತೆ ಪ್ರತಿವಾದಿಯರ ತಾಯಿ ಪದ್ಮಮ್ಮ ರವರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈಗ ಸದರಿ ಜಾಗದಲ್ಲಿ ಪ್ರತಿವಾದಿಯರು ಹಾಗೂ ಅವರ ತಾಯಿ ಸೇರಿಕೊಂಡು ಕಟ್ಟಡ ನಿರ್ಮಾಣ ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು, ನಮಗೆ ಸೇರಿದ ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿಗೂ ಹಾಗೂ ಪ್ರತಿವಾದಿಯರು ಕಟ್ಟಡ ಕಟ್ಟಿರುವ ಜಾಗಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

8. ನನ್ನ ಮತ್ತು ನನ್ನ ಸಹೋದರರ ನಡುವೆ ನ್ಯಾಯಾಲಯಗಳಲ್ಲಿ 05 ದಾವೆಗಳು ನಡೆಯುತ್ತಿವೆ ಎಂದರೆ ಸರಿ. ನೀವು ಸಹೋದರರು ಸೇರಿಕೊಂಡು ನಿಮ್ಮ ಇನ್ನೊಬ್ಬ ಸಹೋದರರ ಲಕ್ಷ್ಮೀ ರೆಡ್ಡಿ ರವರ ವಿರುದ್ಧ ದಾವೆಗಳನ್ನು ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ಸರಿಯಲ್ಲ, ನಾನು ವಿಭಾಗಕ್ಕಾಗಿ ಒಂದು ದಾವೆ ಮಾತ್ರ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರರು ಸಹ ನನ್ನ ಇನ್ನೊಬ್ಬ ಸಹೋದರ ಲಕ್ಷ್ಮೀ ರೆಡ್ಡಿ ರವರ ವಿರುದ್ಧ ದಾವೆಗಳನ್ನು ದಾಖಲಿಸಿದ್ದಾರೆ ಎಂದರೆ ಸರಿ. ನನ್ನ ತಂದೆ ಲಕ್ಷ್ಮೀ ರೆಡ್ಡಿ ಹಾಗೂ ಆತನ ಮಕ್ಕಳ ವಿರುದ್ಧ ಮೂರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಪ್ರತಿವಾದಿಯರು ನಿಮ್ಮ ಸಹೋದರ ಲಕ್ಷ್ಮೀ ರೆಡ್ಡಿ ರವರಿಗೆ ಬಹಳ ಆತ್ಮೀಯರಾಗಿರುತ್ತಾರೆ ಎಂದರೆ ಸಾಕ್ಷಿಯು ಆ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಲಕ್ಷ್ಮೀ ರೆಡ್ಡಿ ರವರ ಎಲ್ಲ ಪ್ರಕರಣಗಳಲ್ಲಿ ಅವರಿಗೆ ಬೆಂಬಲ ನೀಡುತ್ತಾರೆ ಎಂದು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

9. ಸಾಕ್ಷಿಗೆ ನಿಪಿ-7 ರ ನಕಾಶೆಯನ್ನು ತೋರಿಸಿ ಪ್ರತಿವಾದಿಯರು ಕಟ್ಟಡ ನಿರ್ಮಾಣ ಮಾಡುತ್ತಿರುವ ಜಾಗ ನಿಮ್ಮ ಜಮೀನಿನ ಒಂದು ಮೂಲೆಯಲ್ಲಿ ಇರುವುದಾಗಿ ತೋರಿಸಿದ್ದೀರಿ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಕಟ್ಟಡ ಕಟ್ಟುತ್ತಿರುವ ಜಾಗದ ಚಕ್ ಬಂದಿ ಗೊತ್ತಿದೆಯೇ ಎಂದರೆ ಸಾಕ್ಷಿಯು ಅದರ ನಾಲ್ಕು ಕಡೆಗೆ ನಮ್ಮ ಜಮೀನೇ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-8 ರ ನಕಾಶೆಯನ್ನು

ತೋರಿಸಿ ಅದರಲ್ಲಿ ಪ್ರತಿವಾದಿಯರು ಕಟ್ಟುತ್ತಿರುವ ಜಾಗದ ಪೂರ್ವಕ್ಕೆ ಮಾತ್ರ ನಿಮ್ಮ ಜಮೀನು ಇರುವುದಾಗಿ ತೋರಿಸಿದ್ದೀರಿ ಹೊರತು ಪೂರ್ವಕ್ಕೆ ಏನು ಇದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಪೂರ್ವಕ್ಕೊ ಸಹ ನಮ್ಮ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಉತ್ತರಕ್ಕೆ ಗ್ರಾಮ ಪಂಚಾಯಿತಿಯ ಗ್ರಂಥಾಲಯ ಕಟ್ಟಡ ಹಾಗೂ ದಕ್ಷಿಣಕ್ಕೆ ಸೆಟಲ್ ಮೆಂಟ್ ಏರಿಯಾ (ಗ್ರಾಮ ಠಾಣಾ) ಎಂದು ನಮೂದಿಸಿದ್ದೀರಿ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-3ರ ಫೋಟೋವನ್ನು ತೋರಿಸಿ ಅದರಲ್ಲಿ ಪ್ರತಿವಾದಿಯರು ಕಟ್ಟುತ್ತಿರುವ ಕಟ್ಟಡ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿಯು ಫೋಟೋವನ್ನು ನೋಡಿ ಸರಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-5ರ ಫೋಟೋವನ್ನು ತೋರಿಸಿ ಅದರಲ್ಲಿ ಪ್ರತಿವಾದಿಯರು ಕಟ್ಟುತ್ತಿರುವ ನಿರ್ಮಾಣದ ಹಂತದಲ್ಲಿ ಇರುವ ಕಟ್ಟಡ ಕಾಣಿಸುತ್ತಿದ್ದು ಅದಕ್ಕೆ ಹೊಂದಿಕೊಂಡು ಬಿಳಿ ಗೋಡೆಯ ಪ್ರತಿವಾದಿಯರ ಹಳೆ ಮನೆ ಇದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-4ರ ಫೋಟೋವನ್ನು ತೋರಿಸಿ ಅದರಲ್ಲಿ ಕೆಂಪು ಶಾಹಿಯಿಂದ ಗುರುತಿಸಿದ ಪ್ರತಿವಾದಿಯರು ಕಟ್ಟುತ್ತಿರುವ ಕಟ್ಟಡದ ಒಂದು ಕಡೆಗೆ ಗ್ರಾಮಠಾಣಾ ಮತ್ತು ಇನ್ನೊಂದು ಕಡೆಗೆ ಸರಕಾರಿ ಜಮೀನು ಇರುವುದಾಗಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ಕಟ್ಟಡ ಮತ್ತು ಸರಕಾರಿ ಜಮೀನಿನ ನಡುವೆ ನಮ್ಮ ಸರ್ವೆ ನಂ.585/1ರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮಂದುವರೆದು ಕಟ್ಟಡ ಮತ್ತು ಗ್ರಾಮ ಠಾಣಾ ಜಾಗದ ನಡುವೆಯೂ ಸಹ ಸುಮಾರು 15-20 ಅಡಿ ನಮಗೆ ಸೇರಿದ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಆದರೆ ನಿಪಿ-4 ರಲ್ಲಿ ನಿಮಗೆ ಸೇರಿದ ಜಾಗ ಇದೆ ಎಂಬುದನ್ನು ನಿಖರವಾಗಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದು ದಿಶಾಂಕ್ ಅಪ್ಲಿಕೇಶನ್ ನಿಂದ ಪಡೆದುಕೊಂಡಿರುವ ಫೋಟೋ ಆಗಿರುವುದರಿಂದ ಅದರಲ್ಲಿ ನಿಖರವಾಗಿ ತೋರಿಸಲು ಸ್ಥಳಾವಕಾಶ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿಶಾಂಕ್ ಅಪ್ಲಿಕೇಶನಲ್ಲಿನ ದಾವಾ ಆಸ್ತಿಗೆ ಸಂಬಂಧಿಸಿದ ಫೋಟೋವನ್ನು enlarge ಮಾಡಿ ನೋಡಿದಾಗ ಯಾವ ರೀತಿ ವಸ್ತು ಸ್ಥಿತಿ ಇದೆ ಎಂಬುದು ನಿಖರವಾಗಿ ಗೊತ್ತಾಗುತ್ತದೆ ಎಂದರೆ ಸರಿ. ಪ್ರತಿವಾದಿಯರು ಕಟ್ಟಡ ಕಟ್ಟುತ್ತಿರುವ ಜಾಗ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಇದ್ದರೂ ಸಹ ಅವರು ನನ್ನ ಜಮೀನಿನಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ ಎಂದು ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.585/1ರ ಜಮೀನನ್ನು ಅಳತೆ ಮಾಡಿ ಹದ್ದುಬಸ್ತ್ ಗುರುತಿಸಿದರೆ

ಪ್ರತಿವಾದಿಯರು ಕಟ್ಟುತ್ತಿರುವ ಕಟ್ಟಡ ನನ್ನ ಜಮೀನಿನಲ್ಲಿ ಬರುತ್ತದೆಯೋ ಅಥವಾ ಇಲ್ಲವೋ ಎಂಬುದು ಗೊತ್ತಗುತ್ತದೆ ಎಂದರೆ ಸರಿ. ನೀವು ಇದುವರೆಗೆ ನಿಮ್ಮ ಜಮೀನು ಸರ್ವೆ ಮಾಡಿಸಲು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಗ್ರಾಮಠಾಣಾ ಜಾಗದಲ್ಲಿ ಕಟ್ಟಡ ಕಟ್ಟುತ್ತಿರುವುದು ನನಗೆ ಗೊತ್ತಿರುವುದರಿಂದ ನನ್ನ ಜಮೀನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ಜಮೀನು ಸರ್ವೆ ಮಾಡಿಸದೇ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ